ದಿನದ ಪಟ್ಟಿಯಲ್ಲಿ ಸೇರಿಸಲಾದ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು

153 (790) ಶ್ರೀಮತಿ ವಿಜಯಲಕ್ಷ್ಮಮ್ಮ ಬಂಡಿಸಿದ್ದೇಗೌಡ (ಶ್ರೀರಂಗಪಟ್ಟಣ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶ್ರೀರಂಗಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಟ್ಟಡಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಕಾಲೇಜಿನಲ್ಲಿ ಶೌಚಾಲಯದ ಕೊರತೆಯಿಂದ ವಿದ್ಯಾರ್ಥಿನಿಯರಿಗೆ ತೊಂದರೆಯಾಗಿರುವುದನ್ನು ಗಮನಿಸಲಾಗಿದೆಯೆ;

ಇ) ಹಾಗಿದ್ದಲ್ಲಿ ಈ ಎರಡು ತೊಂದರೆಗಳನ್ನು ನಿವಾರಿಸಲು ಸರ್ಕಾರದ ನಿಲುವೇನು?

ಶ್ರೀ ಬಸವರಾಜ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ಸದರಿ ಪದವಿ ಪೂರ್ವ ಕಾಲೇಜಿಗೆ 2.50 ಲಕ್ಷ ರೂ.ಗಳ ವೆಚ್ಚದಲ್ಲಿ ಸುಸಜ್ಜಿತ ಶೌಚಾಲಯಗಳನ್ನು ವಿದ್ಯಾರ್ಥಿನಿಯರಿಗಾಗಿ ನಿರ್ಮಿಸಿಕೊಡಲಾಗಿದೆ. ಹಾಲಿ ಶೌಚಾಲಯಗಳು ಸುಸ್ಥಿತಿಯಲ್ಲಿರುವುದರಿಂದ ಈ ಸಮಸ್ಯೆ ಇರುವುದಿಲ್ಲ.

ಇ) ಸರ್ಕಾರಿ ಪದವಿ ಪೂರ್ವ ಕಾಲೇಜು ಶ್ರೀರಂಗಪಟ್ಟಣ ಇಲ್ಲಿ ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜು, ಪಾಳಿ ಪದ್ಧತಿಯಲ್ಲಿ ನಡೆಯುತ್ತಿದೆ. ಸದರಿ ಪದವಿ ಪೂರ್ವ ಕಾಲೇಜಿನಲ್ಲಿ 16 ತರಗತಿ ಕೊಠಡಿಗಳಿವೆ. ಸದರಿ ಕಟ್ಟಡದಲ್ಲಿ ನಡೆಯುತ್ತಿದ್ದ ಪ್ರಥಮ ದರ್ಜೆ ಕಾಲೇಜು ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಳ್ಳಲಿದ್ದು ಸ್ಥಳಾಂತರಿಸಿದ ನಂತರ ತರಗತಿ ಕೊಠಡಿಗಳ ಸಮಸ್ಯೆ ಇರುವುದಿಲ್ಲ ಹಾಗೂ 2006–2007ನೇ ಸಾಲಿನಲ್ಲಿ ಆರ್.ಐ.ಡಿ.ಎಫ್.–11 ಯೋಜನೆಯಡಿಯಲ್ಲಿ 2 ತರಗತಿ ಕೊಠಡಿಗಳ ನಿರ್ಮಾಣಕ್ಕೆ ಮಂಜೂರಾತಿ ನೀಡಲಾಗಿದೆ. ಈ ಕ್ರಮಗಳಿಂದ ಸದರಿ ಪದವಿ ಪೂರ್ವ ಕಾಲೇಜಿನಲ್ಲಿ ಕೊಠಡಿಗಳ ಹಾಗೂ ಶೌಚಾಲಯದ ಸಮಸ್ಯೆ ನಿವಾರಿಸಲು ಕ್ರಮ ಜರುಗಿಸಿದೆ.

157 (861) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳ ಅವಧಿಯಲ್ಲಿ (ದಿ: 30.5.06ರವರೆಗೆ) ಪ್ರತಿ ವರ್ಷ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ನಬಾರ್ಡ್ ಮತ್ತು ಆರ್.ಐ.ಡಿ.ಎಫ್. ನಿಂದ ಬಂದಿರುವ ಅನುದಾನ ಮೊತ್ತವೆಷ್ಟು;

ಆ) ಮೇಲ್ಕಂಡ ಅವಧಿಯಲ್ಲಿ ನಬಾರ್ಡ್ ಮತ್ತು ಆರ್.ಐ.ಡಿ.ಎಫ್. ನಿಂದ ಬಂದಿರುವ ಅನುದಾನದ ಮೊತ್ತವೆಷ್ಟು? ಈ ಅನುದಾನವನ್ನು ಯಾವ ಯಾವ ಅಭಿವೃದ್ಧಿ ಕಾಮಗಾರಿಗಳಿಗೆ ಉಪಯೋಗಿಸಲಾಗಿದೆ.

ಇ) ಮೇಲ್ಕಂಡ ಅವಧಿಯಲ್ಲಿ ನಬಾರ್ಡ್ ಮತ್ತು ಆರ್.ಐ.ಡಿ.ಎಫ್ ನಿಂದ ಬಂದಿರುವ ಅನುದಾನದಲ್ಲಿ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಬಸವಕಲ್ಯಾಣ ಮತ ಕ್ಷೇತ್ರದಲ್ಲಿ ಯಾವ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಇದರಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ. ಹಾಗೂ ಎಷ್ಟು ಅಪೂರ್ಣವಾಗಿವೆ. ಮತ್ತು ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು.

ಈ) ಪ್ರಸಕ್ತ ಹಾಲಿನಲ್ಲಿ ನಬಾರ್ಡ್ ಮತ್ತು ಆರ್.ಐ.ಡಿ.ಎಫ್. ನಿಂದ ಎಷ್ಟು ಅನುದಾನ ಲಭ್ಯವಾಗಲಿದೆ. ಈ ಅನುದಾನದಲ್ಲಿ ಬಸವ ಕಲ್ಯಾಣ ಮತ ಕ್ಷೇತ್ರದಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿರುವ ಕಾಮಗಾರಿಗಳ ವಿವರಗಳೇನು.

ಉ) ನಬಾರ್ಡ್ ಮತ್ತು ಆರ್.ಐ.ಡಿ.ಎಫ್. ನಿಂದ ಬಂದಿರುವ ಅನುದಾನವನ್ನು ರಾಜ್ಯ ಸರ್ಕಾರವು ಸಮರ್ಪಕವಾಗಿ ಬಳಕೆ ಮಾಡಿಕೊಂಡಿದೆಯೇ (ವಿವರಗಳನ್ನು ಒದಗಿಸುವುದು)?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್. ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ (ದಿನಾಂಕ : 30.5.2006ರವರೆಗೆ) ನಬಾರ್ಡ್ ಯೋಜನೆಯಡಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಈ ಕೆಳಗಿನಂತೆ ಅನುದಾನ ಬಂದಿರುತ್ತದೆ.

1.	2002–03	ರೂ. 1598.05 ಲಕ್ಷ
2.	2003–04	ರೂ. 2318.01 ಲಕ್ಷ
3.	2004–05	ರೂ. 2900.00 ಲಕ್ಷ
4.	2005–06	ರೂ. 5000.00 ಲಕ್ಷ
	ಒಟ್ಟು	**ರೂ. 11816.06 ಲಕ್ಷ**

ಆ) ಮೇಲ್ಕಂಡ ಅವಧಿಯಲ್ಲಿ ಒಟ್ಟು ರೂ. 11816.06 ಲಕ್ಷ ಅನುದಾನ ಒದಗಿಸಲಾಗಿದೆ. ಈ ಅನುದಾನವನ್ನು ಗ್ರಾಮೀಣ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಉಪಯೋಗಿಸಲಾಗುತ್ತಿದೆ.

ಇ) ಮೇಲ್ಕಂಡ ಅವಧಿಯಲ್ಲಿ ನಬಾರ್ಡ್ ಯೋಜನೆಯಡಿ ಬಿಡುಗಡೆಯಾದ ಅನುದಾನದಲ್ಲಿ ತೆಗೆದುಕೊಂಡ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ.	**ತೆಗೆದುಕೊಂಡ ಕಾಮಗಾರಿಗಳ ವಿವರ**	**ಪೂರ್ಣ ಗೊಂಡಿದ್ದು**	**ಪ್ರಗತಿಯಲ್ಲಿರುವುದು**
1	ರಸ್ತೆ ಕಾಮಗಾರಿ–12 ಸಂಖ್ಯೆ	–	12

ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಈ) ಪ್ರಸಕ್ತ ಸಾಲಿನಲ್ಲಿ ಆರ್.ಐ.ಡಿ.ಎಫ್. ಕಾಮಗಾರಿಗಾಗಿ ಅನುದಾನ ಬಿಡುಗಡೆಯಾಗಬೇಕಾಗಿದೆ.

ಉ) ನಬಾರ್ಡ್ ಮತ್ತು ಆರ್.ಐ.ಡಿ.ಎಫ್ ನಿಂದ ಬಂದಿರುವ ಅನುದಾನವನ್ನು ರಾಜ್ಯ ಸರ್ಕಾರವು ಸಮರ್ಪಕವಾಗಿ ಬಳಕೆ ಮಾಡಿಕೊಂಡಿದೆ. ವಿವರ ಕೆಳಗಿನಂತಿದೆ.

ಕ್ರ.ಸಂ.	ವರ್ಷ	ಬಿಡುಗಡೆಯಾದ ಅನುದಾನ	ವೆಚ್ಚ ಮಾಡಲಾದ ಮೊತ್ತ (ರೂ. ಲಕ್ಷಗಳಲ್ಲಿ)
1	2002–03	1598.05	325.70
2	2003–04	2318.01	2964.46
3	2004–05	2900.00	3075.09
4	2005–06	5000.00	2587.97
5	2006–07	–	952.75
	ಒಟ್ಟು	**11816.06**	**9905.97**

ಅನುಬಂಧ–1

ಬೀದರ್ ಜಿಲ್ಲೆ ಬಸವಕಲ್ಯಾಣ ಮತ ಕ್ಷೇತ್ರದಲ್ಲಿ ತೆಗೆದುಕೊಳ್ಳಲಾದ ಕಾಮಗಾರಿಗಳ ವಿವರ.

ಕ್ರಸ	ರಸ್ತೆ ಸುಧಾರಣೆ ಕಾಮಗಾರಿಗಳು	RIDF ಮಾಲಿಕೆ	ಅನುಮೋದಿತ ರಸ್ತೆ ಉದ್ದ (ಕಿ.ಮೀ.ಗಳಲ್ಲಿ)	ಅಂದಾಜು ಮೊತ್ತ ರೂ. ಗಳಲ್ಲಿ	ವೆಚ್ಚ ಮಾಡಲಾದ ಮೊತ್ತ ರೂ. ಲಕ್ಷ ಗಳಲ್ಲಿ	ಶರಾ
1	2	3	4	5	6	7
1	ಹಂದ್ರಾಳ ಸರಹದ್ದಿನಿಂದ ಆನಂದವಾಡಿ ವಾಯಾ ಬಜನಮುಗುಳಿ ರಸ್ತೆ ಕಿ.ಮೀ. 3.60 ರಸ್ತೆ ಸುಧಾರಣೆ ಕಾಮಗಾರಿ	IX	3.60	33.00	0.00	ಪ್ರಗತಿಯಲ್ಲಿದೆ.
2	ಕಾಸರ ಸಿರ್ಸಿ ಸರಹದ್ದಿನಿಂದ ತಳಮೂಡವರೆಗೆ ವಾಯಾ ಜಜನಮುಗುಳಿ ರಸ್ತೆ ಕಿ.ಮೀ. 4.00 ರಸ್ತೆ ಡಾಂಬರೀಕರಣ ಮತ್ತು ಸುಧಾರಣೆ ಕಾಮಗಾರಿ	IX	4.00	38.00	12.59	ಪ್ರಗತಿಯಲ್ಲಿದೆ.
3	ರಾಜ್ಯ ಹೆದ್ದಾರಿ 11 ರಿಂದ ತಾಂಬೋಲ ಸರಹದ್ದಿನವರೆಗೆ ವಾಯಾ ಗೌರ ರಸ್ತೆ ಕೀ.ಮೀ. 5.40 ರಸ್ತೆ ಡಾಂಬರೀಕರಣ ಮತ್ತು ಸುಧಾರಣೆ ಕಾಮಗಾರಿ	IX	5.40	42.00	0.00	ಪ್ರಗತಿಯಲ್ಲಿದೆ.
4	ಮೈಸಲಗಾದಿಂದ ಭಾಗಹಿಪ್ಪರಗಾ ಕಿ.ಮೀ. 6.30 ರಸ್ತೆ ಡಾಂಬರೀಕರಣ ಮತ್ತು ಸುಧಾರಣೆ ಕಾಮಗಾರಿ	IX	6.30	43.00	12.18	ಪ್ರಗತಿಯಲ್ಲಿದೆ.
5	ಮಲಗಿ ಸರಹದ್ದಿನಿಂದ ಮದರವಾಡಿ ವಾಯಾ ಉಜಳಂ ರಸ್ತೆ ಕ.ಮೀ. 4.60 ರಸ್ತೆ ಡಾಂಬರೀಕರಣ ಮತ್ತು ಸುಧಾರಣೆ ಕಾಮಗಾರಿ	IX	3.90	45.00	21.21	ಪ್ರಗತಿಯಲ್ಲಿದೆ.

1	2	3	4	5	6	7
7	ಉಜಳಂದಿಂದ ಬೋಸಗಾ ವಾಯಾ ಜೋಗೇವಾಡಿ ರಸ್ತೆ ಕಿ.ಮೀ. ಡ 5.00 ರಸ್ತೆ ಡಾಂಬರೀಕರಣ ಮತ್ತು ಸುಧಾರಣೆ ಕಾಮಗಾರಿ.	IX	5.00	50.00	25.99	ಪ್ರಗತಿಯಲ್ಲಿದೆ.
8	ಘೋಟಾಳದಿಂದ ಮದರವಾಡಿ ವಾಯಾ ಮುಗುಳಿ ರಸ್ತೆ ಡಾಂಬರೀಕರಣ ಮತ್ತು ಸುಧಾರಣೆ ಕಾಮಗಾರಿ	IX	6.50	57.00	0.00	ಪ್ರಗತಿಯಲ್ಲಿದೆ.
9	ರಾಷ್ಟ್ರೀಯ ಹೆದ್ದಾರಿ 9 ರಿಂದ ಚೌಕಿವಾಡಿ ವಯಾ ಉಮಪೂರ ರಸ್ತೆ ಕಿ.ಮೀ. 7.30 ರಸ್ತೆ ಡಾಂಬರೀಕರಣ ಮತ್ತು ಸುಧಾರಣೆ ಕಾಮಗಾರಿ	IX	7.30	60.00	26.94	ಪ್ರಗತಿಯಲ್ಲಿದೆ.
10	ಹೊನ್ನಳ್ಳಿ ಕ್ರಾಸದಿಂದ ಜೋಗೇವಾಡಿ ವಾಯಾ ಹಂದ್ರಾಲ ನವಚಂದವಾಡಿ ರಸ್ತೆ ಕಿ.ಮೀ. 7.50 ರಸ್ತೆ ಡಾಂಬರೀಕರಣ ಮತ್ತು ಸುಧಾರಣೆ ಕಾಮಗಾರಿ	IX	7.50	82.00	29.39	ಪ್ರಗತಿಯಲ್ಲಿದೆ.
11	ಲಾಡವಂತಿಯಿಂದ ದಾಮೂರಿ ರಾಜ್ಯ ಸರಹದ್ದಿನವರೆಗೆ ವಾಯಾ ಭಾಕನಾಳ ರಸ್ತೆ ಕಿ.ಮೀ. 12.00 ರಸ್ತೆ ಡಾಂಬರೀಕರಣ ಮತ್ತು ಸುಧಾರಣೆ ಕಾಮಗಾರಿ	IX	12.00	115.00	1.41	ಪ್ರಗತಿಯಲ್ಲಿದೆ.
12	ಬಸವಕಲ್ಯಾಣ ನಾಗಣ್ಣಾ ಕಟ್ಟೆಯಿಂದ ರಾ.ಹೆ. 9 ಕೌಡಿಯಾಳ ರಸ್ತೆ ಡಾಂಬರೀಕರಣ ಮತ್ತು ಸುಧಾರಣೆ	X	1.20	12.00	0.00	ಪ್ರಗತಿಯಲ್ಲಿದೆ.
		ಒಟ್ಟು	**67.30**	**627.00**	**134.50**	